**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಹಂತ-8 ಬ್ಯಾಚ್-1ರ ಪ್ಯಾಕೇಜ್ ಸಂಖ್ಯೆ:ಕೆಎನ್-23-57 ಕ್ಕೆ ಸಂಬಂಧಿಸಿದ ಕಾಮಗಾರಿಯಲ್ಲಿ ಉದ್ಭವಿಸಿರುವ ತಕರಾರು ವಿಷಯವನ್ನು ಪರಿಹರಿಸಲು ಅಧಿಕಾರಯುಕ್ತ ಸ್ಥಾಯಿ ಸಮಿತಿಯನ್ನು (Standing Empowered Committee) ರಚಿಸುವ ಕುರಿತು.

ಓದಲಾಗಿದೆ: SBD ಕ್ಲಾಸ್ ಕಂಡಿಕೆ 24.3ರನ್ವಯ.

**ಪ್ರಸ್ತಾವನೆ:**

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಹಂತ-8 ಬ್ಯಾಚ್-Iರ ಪ್ಯಾಕೇಜ್ ಸಂಖ್ಯೆ:ಕೆಎನ್-23-57ರ ಕಾಮಗಾರಿಯನ್ನು ಶ್ರೀ ಬಸಯ್ಯ ಸ್ವಾಮಿ ಗುತ್ತಿಗೆದಾರರಿಗೆ ಟೆಂಡರ್ ಆಧಾರದ ಮೇಲೆ ವಹಿಸಲಾಗಿತ್ತು. ಪ್ಯಾಕೇಜ್ ಸಂಖ್ಯೆ:23-57 ಕಾಮಗಾರಿಯನ್ನು ದಿನಾಂಕ:12-2-2009 ರಂದು ಪ್ರಾರಂಭಿಸಿ ದಿನಾಂಕ: 11-11-2009ರೊಳಗೆ ಪೂರ್ಣಗೊಳಿಸಬೇಕಾಗಿತ್ತು.ಗುತ್ತಿಗೆದಾರರು ಪ್ರಗತಿ ನೀಡಲು ವಿಫಲರಾದ ಕಾರಣ ಸದರಿ ಗುತ್ತಿಗೆಯನ್ನು ದಿನಾಂಣಕ:15-12-2009ರಲ್ಲಿ ಅಂತಿಮಗೊಳಿಸಲಾಗಿದೆ. ಗುತ್ತಿಗೆದಾರರಿಗೆ ಕಾಮಗಾರಿ ಯನ್ನು ಜೂನ್, 2010ರೊಳಗೆ ಪೂರ್ಣಗೊಳಿಸಲು, ಅವಕಾಶ ನೀಡಿ, ಮತ್ತೆ ವಿಫಲರಾಗಿದ್ದಕ್ಕೆ ದಿನಾಂಕ: 27-12-2010 ಮತ್ತು 13-4-2012ರಲ್ಲಿ ಟೆಂಡರ್ ಕರಾರು ಅಂತಿಮಗೊಳಿಸಲಾಗಿದೆ. ಹಲವು ಬಾರಿ ನೋಟಿಸ್‌ಗಳನ್ನು ನೀಡಿ ಮತ್ತೊಮ್ಮೆ ಗುತ್ತಿಗೆದಾರರಿಗೆ ಜನವರಿ, 2013ರೊಳಿಗೆ ಪೂರ್ಣಗೊಳಿಸಲು ಕಾಲಾವಕಾಶ ನೀಡಿದಾಗ್ಯೂ, ಗುತ್ತಿಗೆದಾರರು ವಿಫಲರಾದ ಕಾರಣ ದಿನಾಂಕ:6-9-2013ರಲ್ಲಿ ಗುತ್ತಿಗೆಯನ್ನು ಗುತ್ತಿಗೆ ಕರಾರು ಕಂಡಿಕೆ-52.2 (ಎ) (ಹೆಚ್) ರನ್ವಯ ರದ್ದುಪಡಿಸಲಾಗಿರುತ್ತದೆ. ಗುತ್ತಿಗೆದಾರರು ತಮ್ಮ ಅನಾರೋಗ್ಯದ ನಿಮಿತ್ತ ಹಾಗೂ ರಸ್ತೆಯ ಸರಪಳಿಯಲ್ಲಿ ಭೂ ಮಾಲೀಕರು ಅಡ್ಡಿಪಡಿಸಿದ ಕಾರಣದಿಂದಾಗಿ ಕಾಮಗಾರಿ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲವೆಂದು ನವೆಂಬರ್-2014ರ ತನಕ ಮತ್ತೊಂದು ಅವಕಾಶ ನೀಡಿ ಕಾಲಾವಧಿ ವಿಸ್ತರಣೆಯನ್ನು ನೀಡಬೇಕೆಂದು ಕೋರಿರುತ್ತಾರೆ. ಸದರಿ ಕಾಮಗಾರಿಯ ವಿವಾದವನ್ನು ಇತ್ಯರ್ಥಗೊಳಿಸಲು ಟೆಂಡರ್ ನಿಯಮ 24.3 ರನ್ವಯ ಅಧಿಕಾರಯುಕ್ತ ಸ್ಥಾಯಿ ಸಮಿತಿಯನ್ನು ರಚಿಸಬೇಕಾಗಿ ರುತ್ತದೆ. ಅದರಂತೆ ಈ ಅದೇಶ.

ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:156:ಆರ್‌ಆರ್‌ಸಿ:2013, ಬೆಂಗಳೂರು, ದಿನಾಂಕ:18.8-2014.**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಟೆಂಡರ್ ಕರಾರಿನಲ್ಲಿ ನಿಯಮಾವಳಿಯಲ್ಲಿರುವ ಅವಕಾಶದಂತೆ, ವಿವಾದವನ್ನು ಬರೆಹರಿಸಲು ಅಧಿಕಾರಯುಕ್ತ ಸ್ಥಾಯಿ ಸಮಿತಿ (Standing Empowered Committee) ಯನ್ನು ರಚಿಸಲಾಗಿದ್ದು, ಸಮಿತಿಗೆ ಈ ಕೆಳಕಂಡಂತೆ ಅಧ್ಯಕ್ಷರು ಹಾಗೂ ಸದಸ್ಯರ ನಾಮ ನಿರ್ದೇಶನ ಮಾಡಿ ಆದೇಶ ಹೊರಡಿಸಿದೆ.

**ವಿವರಗಳು**

| | | |
|---|---|---|
| 1 | ಅಧ್ಯಕ್ಷರು | ಹೆಚ್ಚುವರಿ ಕಾರ್ಯದರ್ಶಿಗಳು, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ |
| 2 | ಸದಸ್ಯರು | i. ಮುಖ್ಯ ಇಂಜಿನಿಯರ್, ಪಂ.ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು |

| | | |
|---|---|---|
| 3 | ಸದಸ್ಯರು | ii. ಮೃತ್ಯುಂಜಯ, ನಿವೃತ್ತ ಮುಖ್ಯ ಅಭಿಯಂತರರು (ಗುತ್ತಿಗೆ ದಾರರ ಕೋರಿಕೆಯಂತೆ ) |
| 4 | ಮಂಡನಾಧಿಕಾರಿ | ರಾಜ್ಯ ಗುಣ ನಿಯಂತ್ರಣ ಸಮನ್ವಯಾಧಿಕಾರಿ, ಕೆಆರ್‌ಆರ್‌ಡಿಎ, ಬೆಂಗಳೂರು |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಗ್ರಾಮೀಣ ಮೂಲಭೂತ ಸೌಲಭ್ಯಗಳು ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿಯನ್ನು:**

1. ಮಹಾಲೇಖಪಾಲಕರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲಕರು (ಆಡಿಟ್-1), ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲಕರು (ಆಡಿಟ್-2), ಕರ್ನಾಟಕ, ಬೆಂಗಳೂರು.
4. ಮಾನ್ಯ ಗ್ರಾ.ಅ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿಗಳು, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
7. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಬೆಂಗಳೂರು-9
8. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಗ್ರಾಮೀಣಾಭಿವೃದ್ಧಿ ಭವನ, ಬೆಂಗಳೂರು-9.
9. ಆರ್ಥಿಕ ನಿಯಂತ್ರಕರು, ಕೆಆರ್‌ಆರ್‌ಡಿಎ, ಬೆಂಗಳೂರು.
10. ರಾಜ್ಯ ಗುಣ ನಿಯಂತ್ರಣ ಸಮನ್ವಯಾಧಿಕಾರಿ, ಕೆಆರ್‌ಆರ್‌ಡಿಎ, ಬೆಂಗಳೂರು
11. ಮಾಹಿತಿ ಕೇಂದ್ರಕ್ಕೆ/ ಹೆಚ್ಚುವರಿ ಪ್ರತಿಗಳು.